**ಬೆಳಗಾವಿ ನಗರದಲ್ಲಿನ ಬಳ್ಳಾರಿ ನಾಲೆಯ ಅಭಿವೃದ್ಧಿ**
**47: (418)**
**ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ)**

ಅ) ಬೆಳಗಾವಿ ನಗರದ ಪರಿಮಿತಿಯಲ್ಲಿ ಹರಿದಿರುವ ಬಳ್ಳರಿ ನಾಲೆಯಬದಿಗಳಿಗೆ ಸಿಮೆಂಟ್ ಕಾಂಕ್ರೀಟ್ ಹೊದಿಕೆ ಒದಗಿಸುವ/ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳುವ ಉದ್ದೇಶವು ಸರ್ಕಾರದ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ, ಕಾಮಗಾರಿಯನ್ನು ಯಾವಾಗ ಆರಂಭಿಸಲಾಗುವುದು; ಮೋಜಣಿ ಕಾರ್ಯವು ಮುಗಿದಿದೆಯೇ? ಅಂದಾಜು ಪಟ್ಟಿಯು ಸಿದ್ದವಾಗಿದೆಯೇ? ಇಲ್ಲವಾದಲ್ಲಿ ಯಾವಾಗ ಮಾಡಲಾಗುವುದು?

ಇ) ಹಾಗಿದ್ದಲ್ಲಿ ಕಾಮಗಾರಿಗೆ ಅವಶ್ಯವಾಗಿರುವ ಅಂದಾಜು ಮೊತ್ತವೆಷ್ಟು ?

ಈ) ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ದೊರೆತಿದೆಯೇ?

ಉ) ಹಾಗಿದ್ದಲ್ಲಿ ಕಾಮಗಾರಿಯನ್ನು ಜಲ ಸಂಪನ್ಮೂಲ ಇಲಾಖೆಯಿಂದಲೇ ನಿರ್ವಹಿಸಲಾಗುವುದೇ ಅಥವಾ ಬೇರೆ ಇಲಾಖೆಯಿಂದ ನಿರ್ವಹಿಸಲಾಗುವುದು.

ಊ) ಕಾಮಗಾರಿಯನ್ನು ಯಾವ ಸಾಲಿನಿಂದ ಪ್ರಾರಂಭಿಸಲಾಗುವುದು?

**ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು)**
**(ಜಲಸಂಪನ್ಮೂಲ ಸಚಿವರ ಪರವಾಗಿ)**

ಅ) ಹೌದು.

ಆ)ಸದರಿ ಕಾಮಗಾರಿಯ ಪ್ರಾಥಮಿಕ ಹಂತದ ಸರ್ವೆ ಮತ್ತು ಮೋಜಣಿ ಕೆಲಸಗಳು ಪೂರ್ಣಗೊಂಡಿರುತ್ತವೆ. ಸದರಿ ಕಾಮಗಾರಿಯ ಅಂದಾಜು ಪತ್ರಿಕೆಯನ್ನು ರೂ.70.00 ಕೋಟಿಗಳಿಗೆ (ಲೋಕೋಪಯೋಗಿ ಇಲಾಖೆ 2012–13ರ ದರಪಟ್ಟಿಯಂತೆ) ತಯಾರಿಸಲಾಗಿದ್ದು, ಸದರಿ ಕಾಮಗಾರಿಯ ಕಾರ್ಯಯೋಜನಾ ವರದಿಯನ್ನು ನಿಗಮದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ನಂತರ, ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಇ) ಸದರಿ ಕಾಮಗಾರಿಯ ಕುರಿತಂತೆ ಕಾರ್ಯಯೋಜನಾ ವರದಿಯನ್ನು, ಸೂಕ್ತ ಪ್ರಾಥಮಿಕ ಹಂತದ ಸರ್ವೆ ಮಾಡಿ ಅಂದಾಜು

ವೆಚ್ಚವನ್ನೊಳಗೊಂಡ ವಿವರವಾದ ವರದಿಯನ್ನು 2012–13ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಯಂತೆ ತಯಾರಿಸಲಾಗಿದ್ದು ಅಂದಾಜು ಮೊತ್ತ ರೂ.70.00 ಕೋಟಿ ಆಗಿರುತ್ತದೆ.

ಈ) ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಉ) ಬಳ್ಳಾರಿ ನಾಲೆ ಅಭಿವೃದ್ಧಿ ಕಾಮಗಾರಿಯನ್ನು ಕೇಂದ್ರ ಜಲ ಆಯೋಗದ ಮಾರ್ಗ ಸೂಚಿಯ ಪ್ರಕಾರ ಬಳ್ಳಾರಿ ನಾಲಾ ನೀರಾವರಿ ಯೋಜನೆಯಡಿಯಲ್ಲಿ ಕೈಗೊಳ್ಳಲು ಸಾಧ್ಯವಾಗದೇ ಇರುವುದರಿಂದ, ಸದರಿ ಕಾಮಗಾರಿಯನ್ನು ಪ್ರತ್ಯೇಕವಾದ ಅನುದಾನ ಹಾಗೂ ಅನುಮೋದನೆ–ಯೊಂದಿಗೆ ಜಲ ಸಂಪನ್ಮೂಲ ಇಲಾಖೆಯಿಂದ ಕೈಗೊಳ್ಳಲು ಪರಿಶೀಲಿಸಲಾಗುತ್ತಿದೆ.

ಊ) ಮೇಲೆ ಹೇಳಿದಂತೆ ಅಂತಿಮ ನಿರ್ಧಾರದ ಬಳಿಕ ಕ್ರಮ ವಹಿಸಲಾಗುವುದು.

**ಶ್ರೀ ಅಭಯ ಪಾಟೀಲ್:** ಉತ್ತರವನ್ನು ಒದಗಿಸಿದ್ದಾರೆ. ಬೆಳಗಾವಿ ನಗರದಲ್ಲಿರುವ ಬಳ್ಳಾರಿ ನಾಲಾ ಕಾಂಕ್ರೀಟೀಕರಣದ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದು, ಸುಮಾರು 20 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಯೋಜನೆಗೆ ಈಗಾಗಲೇ ಪ್ರಸ್ತಾವನೆಯನ್ನು ಮಾಡಿ, ಅದನ್ನು ಕೈಗೆತ್ತಿಕೊಳ್ಳುವ ದೃಷ್ಟಿಯಿಂದ T.A.C. ಮುಂದೆ ತರಲಾಗುವುದೆಂದು ಹೇಳಿದ್ದಾರೆ. T.A.C. ಮುಂದೆ ಯಾವಾಗ ತರುತ್ತೀರಿ ಎಂದು ಕೇಳುತ್ತಿದ್ದೇನೆ. ನನ್ನ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು vague ಆಗಿ ಕೊಟ್ಟಿದ್ದಾರೆ. ಹಾಗಾಗಿ ಕಾಮಗಾರಿಯನ್ನು ನಿರ್ದಿಷ್ಟವಾಗಿ ಯಾವಾಗಿನಿಂದ ಪ್ರಾರಂಭ ಮಾಡುತ್ತೀರಿ ಮತ್ತು ಎಷ್ಟು ಕಾಲಾವಧಿಯಲ್ಲಿ ಮಾಡುತ್ತೀರಿ ಎನ್ನುವುದನ್ನು ದಯಮಾಡಿ ತಿಳಿಸಬೇಕಾಗಿ ವಿನಂತಿ.

**ಶ್ರೀ ಸಿ.ಎಂ. ಉದಾಸಿ, ಲೋಕೋಪಯೋಗಿ ಇಲಾಖಾ ಸಚಿವರು (ಜಲ ಸಂಪನ್ಮೂಲ ಸಚಿವರ ಪರವಾಗಿ):** ಮಾನ್ಯ ಸಚಿವರು ಉತ್ತರ ಕೊಡಬೇಕಾದಂಥ ಸಂದರ್ಭದಲ್ಲಿ ಅವರಿಗೆ ಸ್ಪಷ್ಟವಾಗಿ ಹೇಳಿದ್ದಾರೆ. ಆದರೂ ಸಹ "ಅ" ದಲ್ಲಿ ಮತ್ತು "ಉ"ದಲ್ಲಿನ ಪ್ರಶ್ನೆಗಳಿಗೆ ಅನುಮಾನಗಳ ಬಗ್ಗೆ ಈಗ ನನ್ನ ಹತ್ತಿರ ಪ್ರಸ್ತಾಪ ಮಾಡಿದ್ದಾರೆ. ಅದನ್ನು ಮಾನ್ಯ ಸಚಿವರ ಗಮನಕ್ಕೆ ತಂದು 20 ಕೋಟಿ

ರೂಪಾಯಿಗಳಲ್ಲಿ ಆಗಿರುವ ಈ ಯೋಜನೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಸಲಹೆ ನೀಡುತ್ತೇನೆ ಎಂದು ತಮ್ಮ ಮೂಲಕ ಹೇಳುತ್ತಿದ್ದೇನೆ.

**ಇಂಡಿ ತಾಲ್ಲೂಕನ್ನು ಕಪ್ಪು ಪಟ್ಟಿಯಿಂದ ತೆಗೆಯುವುದು.**

**48 (412)**

**ಡಾ : ಬಗಲಿ ಸಾರ್ವಭೌಮ ಸಾತಗೌಡ**

ಅ) ಇಂಡಿ ತಾಲ್ಲೂಕನ್ನು (Over exploitation of groundwater) ಅಡಿಯಲ್ಲಿ ಕಪ್ಪು ಪಟ್ಟಿಗೆ ಸೇರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇತ್ತೀಚಿನ ದಿನಗಳಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಮತ್ತು ಸಣ್ಣ ನೀರಾವರಿ ಇಲಾಖೆಯಿಂದ ನಿರ್ಮಿಸಿದ ಹೊಸ ಕೆರೆಗಳು, ಬಂದರುಗಳು ಮತ್ತು ಚೆಕ್‌ಡ್ಯಾಂಗಳಿಂದಾಗಿ ನೀರಿನ ಪಾತಳಿ (Groundwater Level)ನಲ್ಲಿ ಗಣನೀಯ ಸುಧಾರಣೆ ಆದ ಹಿನ್ನೆಲೆಯಲ್ಲಿ ಇಂಡಿ ತಾಲ್ಲೂಕನ್ನು ಕಪ್ಪುಪಟ್ಟಿಯಿಂದ ವಿಮೋಚನೆಗೊಳಿಸುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ ಗೋವಿಂದ ಎಂ.ಕಾರಜೋಳ**

**(ಮಾನ್ಯ ಸಣ್ಣನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)**

ಅ) ರಾಜ್ಯ ಸರ್ಕಾರವು, ಅಂತರ್ಜಲ ಅತಿಬಳಕೆ ಎಂದು ವರ್ಗೀಕರಿಸಲ್ಪಟ್ಟ 35 ತಾಲ್ಲೂಗಳನ್ನು ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ 2011ನ್ನು ಅನುಷ್ಠಾನಗೊಳಿಸಲು ಅಧಿಸೂಚಿಸಲ್ಪಟ್ಟ ಪಟ್ಟಿಯಲ್ಲಿ ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕು ಇರುವುದಿಲ್ಲ.

ಆ) ಗಣಿ ಭೂವಿಜ್ಞಾನ ಇಲಾಖೆಯು ಕೇಂದ್ರೀಯ ಅಂತರ್ಜಲ ಮಂಡಳಿಯ ಸಹಯೋಗದೊಂದಿಗೆ ಕೇಂದ್ರೀಯ ಅಂತರ್ಜಲ ಪ್ರಾಧಿಕಾರವು ರೂಪಿಸಿದ Groundwater Estimation Committee (GEC1987)ಯ ಮಾರ್ಗಸೂಚಿಯಂತೆ, ಮೌಲೀಕರಣ ಮಾಡಲಾಗಿದ್ದು, ಅಂತರ್ಜಲ ಸಂಪನ್ಮೂಲವನ್ನು ಮೌಲೀಕರಿಸುವಾಗ, ಅಂತರ್ಜಲ ಅಭಿವೃದ್ಧಿ ಮಾಡಲು ಕೈಗೊಂಡ ಅಂತರ್ಜಲ ಮರು ಪೂರ್ಯೆಕೆ ರಚನೆಗಳ ವಿವರಗಳನ್ನು